# ಆಹಾ ಸುದ್ದಿ!

★ ಸಸಿತೋಟ

ಬ್ರೆಜಿಲ್‌ನ ಕಾರಾಗೃಹವೊಂದರಲ್ಲಿ ತನಿಖಾಧಿಕಾರಿಗಳು ಇಲಿಯೊಂದನ್ನು ಹಿಡಿದು ವಿಚಾರಣೆ ಶುರು ಮಾಡಿದ್ದಾರಂತೆ. ಆ ಇಲಿ ಮಾಡಿದ್ದು ಇಷ್ಟೇ. ಬಾಲಕ್ಕೆ ಮಾದಕ ದ್ರವ್ಯ ಮಾರಿಜುವಾನ, ಕೊಕೈನ್ ಪ್ಯಾಕೆಟ್‌ಗಳನ್ನು ಕಟ್ಟಿಕೊಂಡು ಜೈಲಿನ ಕೊಠಡಿಗಳಿಗೆ ಭೇಟಿ ನೀಡುತ್ತಿತ್ತಂತೆ. ಕೈದಿಗಳು ಪ್ಯಾಕೆಟ್ ಪಡೆದುಕೊಂಡು ಮಜಾ ಉಡಾಯಿಸುತ್ತಿದ್ದರು. ಹಿಂದೆ ಬೆಕ್ಕೊಂದು ಇದೇ ಕೆಲಸ ಮಾಡುತ್ತಿತ್ತು. ಈಗ ಇಲಿಗೆ ವರ್ಗಾಯಿಸಿದೆ.



ರಷ್ಯಾದಲ್ಲಿ ವಾರ್ಷಿಕ ಕಲಾ ಪ್ರದರ್ಶನ ನಡೆಯುತ್ತಿದ್ದು, ಕಲಾವಿದ ಗಸನೊವ ಪ್ರದರ್ಶಿಸಿದ ಕಲಾಕೃತಿಯಿದು. ಯುವತಿಯರಿಗೇ ಬಣ್ಣ ಬಳಿದು 'ಜೀವಂತ ಕಲೆ' ಎಂದು ಹೆಸರಿಟ್ಟಿದ್ದಾನಂತೆ. ಕಲಾಕೃತಿ ಬದಲು ಮಾನವಾಕೃತಿ ಎಂದು ಕರೆದು, ಕ್ಯಾನ್‌ವಾಸ್ ದುಡ್ಡು ಉಳಿಸಬಹುದು.



ಚೀನಾದ ರೈತ ಝೂಂಗ್ ಕ್ಸಿಯಾನ್‌ಪಿಂಗ್‌ಗೆ ತನ್ನ ಪ್ರಿಯವಾದ ಸಾಕು ಪ್ರಾಣಿ 'ಬಿಗ್ ಪ್ರೆಷಿಯಸ್' ಸವಾರಿ ಮಾಡುವುದೆಂದರೆ ಎಲ್ಲಿಲ್ಲದ ಖುಷಿಯಂತೆ. ಎರಡು ವರ್ಷದ ಈ ಹಂದಿಯ ಕತ್ತು ಯಜಮಾನನ ಕತ್ತಿಯಿಂದ ಪಾರಾಗಿದ್ದು, ಇದಕ್ಕೆ ಕಾರಣ ಇದರ 600 ಕೆಜಿ ತೂಕವಂತೆ. ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭ ಎಂಬ ಗಾದೆ ಇಲ್ಲಿ ಉಲ್ಟಾ ಆಗಿದೆ.



ಫಿಲಿಪ್ಪೀನ್ಸ್‌ನಲ್ಲಿ ಸ್ಥಳೀಯ ಮಕ್ಕಳ ಸಮಯ ಕಳೆಯುವ ಆಟವಿದು. ಕೋಲಿಗೆ ಎರಡು ಜೇಡಗಳನ್ನು ಇಟ್ಟು ಅವುಗಳ ಹೊಡೆದಾಟವನ್ನು ನೋಡುವುದು. ಸೋತ ಜೇಡ ಕೆಳಗೆ ಬಿದ್ದ ನಂತರ ಇನ್ನೊಂದು ಗೆದ್ದಂತೆ. ಆದರೆ ಆಟಕ್ಕೆ ಬೆಟ್ಟಿಂಗ್ ಇದೆಯಂತೆ. ಎಳವೆಯಲ್ಲೇ ಆಟದ ಜೊತೆ ಬೆಟ್ಟಿಂಗ್ ಪಾಠ.



ಚೀನಾದಲ್ಲಿ ಮದುವೆ ಮನೆಯಲ್ಲಿ ವಧುವಿನ ಸಖಿಯಾಗಿ ಓಡಾಡಲೂ ರೊಬಾಟ್ ರೂಪಿಸಿದ್ದಾರಂತೆ. ಹೊಟೇಲ್‌ನಲ್ಲಿ ಪರಿಚಾರಕಿಯಾಗಿ ಸೇವೆ ಮಾಡುವ ರೊಬಾಟ್ ಅನ್ನೇ ಕೊಂಚ ಆಚೀಚೆ ಮಾಡಿ ಈ ರೂಪ ಕೊಟ್ಟಿದ್ದಾರಂತೆ. ಮದುವೆ ಸಮಾರಂಭದಲ್ಲಿ ವಧುವಿನ ಸಖಿಯರಿಗೆ ಲೈನ್ ಹೊಡೆಯುವ ಪಡ್ಡೆಗಳಿಗೆ ನಿರಾಸೆಯಾಗಿರಬಹುದು.

ಕ್ಯಾಲಿಫೋರ್ನಿಯ ಯುವತಿ ಕಾರ್ಲಿ ತನ್ನ ನಿಶ್ಚಿತಾರ್ಥದ ಉಂಗುರಕ್ಕೆ ಭಾವಿ ಗಂಡನ ವಿಸ್ಡಮ್ ಹಲ್ಲನ್ನು ಕೂರಿಸಿದ್ದಾಳಂತೆ. ಎಲ್ಲಾ ವಿಷಯದಲ್ಲೂ ತಾವು ಸಂಪ್ರದಾಯಸ್ಥರಲ್ಲ ಎಂದು ಆಕೆ ತೋರಿಸಿಕೊಳ್ಳಲು ಹೋಗಿದ್ದೇ ಈ ಎಡವಟ್ಟಿಗೆ ಕಾರಣವಂತೆ. ಏನೇ ಆದರೂ ಈಗ ವಜ್ರ ದುಬಾರಿ ಬಿಡಿ, ಅದಕ್ಕೇ ಮುಂದಾಲೋಚನೆಯುಳ್ಳ ಆಕೆಯ ಭಾವಿ ಪತಿ 17ನೇ ವಯಸ್ಸಿನಲ್ಲಿ ತೆಗೆಸಿಕೊಂಡ ಹಲ್ಲನ್ನು ಭದ್ರವಾಗಿ ಇಟ್ಟುಕೊಂಡಿರಬಹುದು.